ತೊಡಕು ಉಂಟಾಗಿದೆಯೆಂದು ಕೆಲಸದ ಪ್ರಗತಿಗೆ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ?

ಆ) ಹಾಸನ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆಯವರು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಕೆಲಸಗಳಿಗಾಗಿ ಖರ್ಚು ಮಾಡಿರುವ ಹಣ ಎಷ್ಟು?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ ಮತ್ತು ಜೀವ ಪರಿಸರ ಶಾಸ್ತ್ರ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಮತ್ತು ಮಲೆನಾಡು ಪ್ರದೇಶಾಭಿವೃದ್ಧಿ ರಾಜ್ಯ ಸಚಿವರು):

ಅ) ಹಾಸನ ಜಿಲ್ಲೆಯಲ್ಲಿ ಕಾರ್ಯವಿಧಾನದ ತೊಡಕುಗಳಿವೆ.

ಆ) 1.04 ಲಕ್ಷ ರೂ.ಗಳು.

ಶ್ರೀ ಎ.ಟಿ. ರಾಮಸ್ವಾಮಿ : ಸರ್ಕಾರದವರು ಮಲೆನಾಡು ಪ್ರದೇಶದ ಅಭಿವೃದ್ಧಿಗಾಗಿ ಹಣ ಬಿಡುಗಡೆ ಮಾಡಲು ಕಾನೂನಿನ ಅಡಚಣೆ ಇದೆಯೆಂದು ಒಪ್ಪಿಕೊಂಡಿದ್ದಾರೆ. ಇದರಿಂದ ಲೋಕೋಪಯೋಗಿ ಇಲಾಖೆಯ ಕೆಲಸ ಕಾರ್ಯಗಳು ಕುಂಠಿತಗೊಂಡಿದೆ ಎಂಬುದನ್ನೂ ಸಹ ಅವರು ತಮ್ಮ ಉತ್ತರದಲ್ಲಿ ಒಪ್ಪಿಕೊಂಡಿದ್ದಾರೆ. ಮಾನ್ಯ ಸಚಿವರು ನನ್ನ ಒಂದು ಪ್ರಶ್ನೆಗೆ ಉತ್ತರವನ್ನು ಕೊಡಬೇಕು. ಕಾನೂನಿಗಾಗಿ ನಾವು ಇದ್ದೇವೋ ಅಥವಾ ನಮಗಾಗಿ ಕಾನೂನು ಇದೆಯೋ. ನಮಗಾಗಿ ಕಾನೂನು ಇದ್ದರೆ ಆ ಕಾನೂನಿನ ತೊಡಕುಗಳನ್ನು ಏತಕ್ಕೆ ನಿವಾರಣೆ ಮಾಡಲಿಲ್ಲ? ನಿವಾರಣೆ ಮಾಡದೇ ಇದ್ದುದರಿಂದ ಇವತ್ತು ಆ ಪ್ರದೇಶದಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳು ಕುಂಠಿತವಾಗಿಲ್ಲವೇ?

ಶ್ರೀ ಎನ್.ಜಿ. ಹಾಲಪ್ಪ : ಹಾಸನ ಜಿಲ್ಲೆಯಲ್ಲಿ ಮಾತ್ರ ಕೆಲವು ಕಾನೂನು ತೊಡಕು ಇದೆ. ಆ ವಿಚಾರದಲ್ಲಿ ಜಿಲ್ಲಾಮಟ್ಟದಲ್ಲಿ ನಮ್ಮ ಎಕ್ಸಿಕ್ಯೂಟೀವ್ ಇಂಜಿನಿಯರ್ರವರು ರೆಗ್ಯುಲರ್ ಪಿಡಬ್ಲ್ಯೂಡಿ ಅಕೌಂಟ್ಸ್ ಹಣವನ್ನು ಜಮಾ ಮಾಡಿದ್ದಾರೆ. 13-01-1994ರ ಬೋರ್ಡ್ಮೀಟಿಂಗ್ನಲ್ಲಿ ಇದರ ಬಗ್ಗೆ ಚರ್ಚೆಯಾಗಿದೆ. ಚೀಫ್ ಇಂಜಿನಿಯರ್ (ಸಿ ಅಂಡ್ ಬಿ) ರವರು ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿರವರ ಹತ್ತಿರ ಇದರ ಬಗ್ಗೆ ಸಮಾಲೋಚನೆ ಮಾಡಿದ್ದೇವೆ.

ಶ್ರೀ ಎ.ಟಿ. ರಾಮಸ್ವಾಮಿ : ಒಂದು ವರ್ಷದಿಂದ ಕೆಲಸ ಆಗದೆ ಇರುವುದನ್ನು ತಾವು ಗಮನಿಸಲಿಲ್ಲವೇ? ಈ ಮಂಡಳಿಯನ್ನು ರಚಿಸಿದ ಉದ್ದೇಶ ಸಾರ್ಥಕವಾಗಲಿಲ್ಲ ಎಂಬುದು ತಮ್ಮ ಗಮನಕ್ಕೆ ಇಷ್ಟು ದಿವಸಗಳವರೆಗೆ ಬರಲಿಲ್ಲವೇ? ಇಷ್ಟು ದಿವಸ ಸರ್ಕಾರ ಏನು ಮಾಡುತ್ತಿತ್ತು?

ಶ್ರೀ ಎನ್.ಜಿ. ಹಾಲಪ್ಪ : ಎಲ್ಓಸಿ ಕೊಡುವುದರಲ್ಲಿ ಸ್ವಲ್ಪ ತೊಂದರೆಯಾಗಿದೆ. Now we will set it right.

**ಬೈಲಹೊಂಗಲ ತಾಲ್ಲೂಕಿನಲ್ಲಿ ಒಳಚರಂಡಿ ವ್ಯವಸ್ಥೆಯಿಲ್ಲದೆ ವಾಯುಮಾಲಿನ್ಯ.**

67 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಪರಿಸರ ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ವಿಜ್ಞಾನ ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂದಿನ ಪರಿಸರ ಸಚಿವರು ಹೊಸದಾಗಿ ನಿರ್ಮಿಸಿದ ಪುನರ್ ವಸತಿ ಬಡಾವಣೆಗಳಾದ ಬೈಲಹೊಂಗಲ ತಾಲ್ಲೂಕಿನ ವಕ್ಕುಂಡ, ಕೊರವಿಕೊಪ್ಪ, ಬೂದಿಹಾಳ್, ಮೂಗಬಸವ ಹಾಗೂ ಸಂಗೊಳ್ಳಿ ಹಾಗೂ ಸೌದತ್ತಿ ತಾಲ್ಲೂಕಿನ ಸುತ್ತಗಟ್ಟಿ, ಇಟ್ಟಣಗಿ ಇಣಗಿ, ಮಲ್ಲೂರು, ಮಾಡೊಳ್ಳಿ, ಇಂಗಳಗಿ, ಗ್ರಾಮಗಳಲ್ಲಿ ಒಳಚರಂಡಿ ಯೋಜನೆ ಇಲ್ಲದೆ ಇರುವುದರಿಂದ ಹವೆ ದೂಷಿತವಾಗುತ್ತಿದ್ದು, ಒಳಚರಂಡಿ ಯೋಜನೆಯನ್ನು ಕೈಗೊಳ್ಳಬೇಕೆಂದು ಪರಿಸರ ಸಚಿವರು ನೀರಾವರಿ

ಇಲಾಖೆ ಕಾರ್ಯದರ್ಶಿಯವರಿಗೆ ಆದೇಶ ನೀಡಿದ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಮಾನ್ಯ ಪರಿಸರ ಸಚಿವರ ಆದೇಶದ ಪ್ರಕಾರ ನೀರಾವರಿ ಇಲಾಖೆಯ ಕಾರ್ಯದರ್ಶಿಗಳು ಒಳಚರಂಡಿ ಯೋಜನೆ ಮಾಡಲು ಕೈಗೊಂಡ ಕ್ರಮಗಳೇನು?

ಇ) ನೀರಾವರಿ ಇಲಾಖೆಯ ಕಾರ್ಯದರ್ಶಿಗಳು ಹಾಗೂ ಮುಖ್ಯ ಇಂಜಿನಿಯರ್, ನೀರಾವರಿ ಇಲಾಖೆ ಉತ್ತರ ವಲಯ ಬೆಳಗಾಂ, ಇವರು ಒಳಚರಂಡಿ ಯೋಜನೆಗಳನ್ನು ಇದುವರೆಗೂ ಕೈಗೊಳ್ಳದೇ ಇರುವುದರಿಂದ ಸರ್ಕಾರದವರು ಅವರ ಮೇಲೆ ಕಾನೂನು ರೀತ್ಯ ನೋಟೀಸ್ ಕೊಟ್ಟಿದ್ದು ಹಾಗೂ ಅವರ ಮೇಲೆ ಕೇಸ್ ಹಾಕಬೇಕೆಂಬ ನಿರ್ಣಯ ತೆಗೆದುಕೊಂಡ ಸಂಗತಿ ನಿಜವೇ?

ಈ) ಇದುವರೆಗೂ ಅವರು ಒಳಚರಂಡಿ ಯೋಜನೆಯನ್ನು ಸರ್ಕಾರದ ಆದೇಶದ ಪ್ರಕಾರ ಮಾಡದೆ ಇದ್ದಲ್ಲಿ ಹಿಂದಿನ ಮಾನ್ಯ ಪರಿಸರ ಸಚಿವರ ಆದೇಶದನ್ವಯ ಸರ್ಕಾರದವರು ನೀರಾವರಿ ಇಲಾಖೆಯ ಕಾರ್ಯದರ್ಶಿಗಳ ಮೇಲೆ ಹಾಗೂ ಮುಖ್ಯ ಇಂಜಿನಿಯರ್ ನೀರಾವರಿ ಇಲಾಖೆ, ಬೆಳಗಾಂ ಇವರ ಮೇಲೆ ಕೂಡಲೇ ಕ್ರಮ ಕೈಗೊಳ್ಳುವರೆ?

ಶ್ರೀ ಎನ್.ಜಿ. ಹಾಲಪ್ಪ (ಪರಿಸರ, ಜೀವಿ ಪರಿಸ್ಥಿತಿ ಶಾಸ್ತ್ರ ಮತ್ತು ವಿಜ್ಞಾನ ಯಂತ್ರಕಲಾ ಹಾಗೂ ಮಲೆನಾಡು ಪ್ರದೇಶ ಅಭಿವೃದ್ಧಿ ರಾಜ್ಯ ಸಚಿವರು) :

ಅ) ಹೌದು.

ಆ) ನೀರಾವರಿ ಇಲಾಖೆಯವರು ಈ ವಿಷಯವನ್ನು ಮುಖ್ಯ ಅಭಿಯಂತರರ ಮಂಡಳಿಯ ಮುಂದೆ ಚರ್ಚೆಗಾಗಿ ಮಂಡಿಸಿದ್ದು, ಅವರ ಶಿಫಾರಸ್ಸಿನಂತೆ ಮುಂದಿನ ಕ್ರಮ ಜರುಗಿಸಲಾಗುವುದೆಂದು ತಿಳಿಸಿರುತ್ತಾರೆ.

ಇ) ನೀರಾವರಿ ಇಲಾಖೆಯ ಕಾರ್ಯದರ್ಶಿಗಳಿಗೆ ಸರ್ಕಾರದಿಂದಲೂ ಹಾಗೂ ಮುಖ್ಯ ಇಂಜಿನಿಯರ್ ನೀರಾವರಿ ಉತ್ತರ ವಲಯ ಬೆಳಗಾಂರವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದಲೂ ನೋಟೀಸ್ಗಳನ್ನು ನೀಡಲಾಗಿದೆ. ಈ ಇಲಾಖೆಯ ಅಧಿಕಾರಿಗಳ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಈ) ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಎಸ್.ಹೆಚ್. ಕೌಜಲಗಿ : ಹಿಂದಿನ ಪರಿಸರ ಖಾತೆಯ ಮಂತ್ರಿಗಳು ಯಾವ ದಿನಾಂಕದಿಂದ ಒಳಚರಂಡಿ ಯೋಜನೆಯನ್ನು ಕೈಗೊಳ್ಳಬೇಕೆಂದು ಸರ್ಕಾರದ ನೀರಾವರಿ ಇಲಾಖೆಯ ಕಾರ್ಯದರ್ಶಿಯವರಿಗೆ ಆದೇಶ ನೀಡಿದ್ದರು? ಸರ್ಕಾರದವರು ಈ ಯೋಜನೆಯನ್ನು ಕೈಗೊಳ್ಳದೇ ಇದ್ದುದರಿಂದ ಪರಿಸರ ಖಾತೆಯ ಮಂತ್ರಿಗಳು ಯಾವ ತಾರೀಖು ರಿಮೇಂಡರ್ ಇಷ್ಯೂ ಮಾಡಿ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದ್ದರು? ಈ ಪರಿಸರ ಖಾತೆಯ ಮಂತ್ರಿಗಳು ಆದೇಶದ ಪ್ರಕಾರ ನೀರಾವರಿ ಕಾರ್ಯದರ್ಶಿಯರ ಮೇಲೆ ಹಾಗೂ ಮುಖ್ಯ ಇಂಜಿನಿಯರ್ರವರ ಮೇಲೆ ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ ಎಂಬುದನ್ನು ತಿಳಿಯಬಯಸುತ್ತೇನೆ.

ಶ್ರೀ ಎನ್.ಜಿ. ಹಾಲಪ್ಪ : ಈ ವಿಚಾರ ಬೋರ್ಡ್ ಆಫ್ ಚೀಫ್ ಇಂಜಿನಿಯರ್ಸ್ನಲ್ಲಿ ಚರ್ಚೆ ಆಗಬೇಕಾಗಿದೆ. ಅವರು ಏನು ಅಭಿಪ್ರಾಯವನ್ನು ಕೊಡುತ್ತಾರೆ ಎಂಬುದನ್ನು ನೋಡಿಕೊಂಡು ಅನಂತರ ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಸ್.ಹೆಚ್. ಕೌಜಲಗಿ : ನಾನು ಕೇಳಿರತಕ್ಕ ಪ್ರಶ್ನೆಯೇ ಬೇರೆ ಮಂತ್ರಿಗಳ ಉತ್ತರವೇ ಬೇರೆ. ಮಾನ್ಯ ಬಸವಲಿಂಗಪ್ಪನವರು ಹಿಂದೆ ಪರಿಸರ ಮಂತ್ರಿಗಳಾಗಿದ್ದಾಗ

ಈ ಏರಿಯಾದಲ್ಲಿ ಒಳಚರಂಡಿ ಯೋಜನೆಯನ್ನು ಮಾಡಬೇಕೆಂದು ನೀರಾವರಿ ಕಾರ್ಯದರ್ಶಿಯವರಿಗೆ ಆದೇಶ ನೀಡಿದ್ದರು. ಆದರೆ ಅವರು ಯಾವುದೇ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಆದ್ದರಿಂದ ಸೆಕ್ಷನ್ 17ರ ಪ್ರಕಾರ ಅವರ ಮೇಲೆ ಕೇಸ್ ಹಾಕಬೇಕೆಂದು ಮಾನ್ಯ ಮಂತ್ರಿಗಳು ಆದೇಶ ನೀಡಿದ್ದರು. ಅದು ಯಾವ ತಾರೀಖು ಎಂಬುದನ್ನು ಹೇಳಬೇಕು.

ಶ್ರೀ ಎನ್.ಜಿ. ಹಾಲಪ್ಪ : ಅವರ ಮೇಲೆ ಸೆಕ್ಷನ್ 17ರ ಪ್ರಕಾರ ಕ್ರಮ ತೆಗೆದುಕೊಳ್ಳತಕ್ಕದ್ದು There is some legal problem involved. That is being examined. After examination, suitable action will be taken.

ಶ್ರೀ ಆರ್.ವಿ. ದೇಶಪಾಂಡೆ : ಇವರು ಏನು ಹೇಳುತ್ತಿದ್ದಾರೆ ಅಂದರೆ ಮಲಪ್ರಭ, ಘಟಪ್ರಭಾ ಅಂಡರ್‌ಗ್ರೌಂಡ್ ಡ್ರೈನೇಜ್ ಮಾಡಬೇಕೆಂದು.

ಶ್ರೀ ಎಸ್.ಹೆಚ್. ಕೌಜಲಗಿ : ನಾವು ಸಮಿತಿ ಮಾಡುತ್ತೇವೆ, ಅದು ಮಾಡುತ್ತೇವೆ, ಇದು ಮಾಡುತ್ತೇವೆಂದು ಹೇಳುತ್ತಿದ್ದಾರೆ. ನಾನು ಕೇಳಿದ ಎರಡು ಪ್ರಶ್ನೆಗೆ ಉತ್ತರ ಹೇಳಿದರೆ ಸಾಕು. ಮೊದಲನೆಯ ಪ್ರಶ್ನೆ ಎಂದರೆ ದಿವಂಗತ ಬಸವಲಿಂಗಪ್ಪನವರು ಯಾವ ದಿನಾಂಕದಂದು ಸರ್ಕಾರಕ್ಕೆ ಆದೇಶ ನೀಡಿದ್ದರು? ಅವರು ಕ್ರಮ ತೆಗೆದಕೊಳ್ಳದೇ ಇದ್ದಾಗ ಸೆಕ್ಷನ್ 17ರ ಪ್ರಕಾರ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ತಿಳಿಸಿ ಮತ್ತೆ ಯಾವ ತಾರೀಖು ಆದೇಶ ನೀಡಿದರೆಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು.

Sri N.G. Halappa : The matter is under correspondence. I don't have the dates now. Against whom action is to be taken, who is responsible for this pollution all these things are legal problems that are under examination and it is placed before the Board of Chief Engineers, Please have some patience.

ಶ್ರೀ ಎಸ್.ಹೆಚ್. ಕೌಜಲಗಿ : ನನಗೆ ಪೇಷನ್ಸ್ ಇದೆ. ಎರಡು ವರ್ಷಗಳ ಹಿಂದೆ ಮಾನ್ಯ ಬಸವಲಿಂಗಪ್ಪನವರು ಸರ್ಕಾರಕ್ಕೆ ಯಾವ ತಾರೀಖು ಆದೇಶ ನೀಡಿದ್ದರು ಅವತ್ತಿನಿಂದ ಇವತ್ತಿನವರೆಗೂ ಸರ್ಕಾರ ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಅಂದಮೇಲೆ ಇದು ಯಾವ ರೀತಿಯ ಆಡಳಿತ ಎಂದು ಕೇಳಬೇಕಾಗುತ್ತದೆ? ಬೋರ್ಡ್ ಆಫ್ ಚೀಫ್ ಇಂಜಿನಿಯರ್ ಮುಂದೆ ಹೋಗಿ ಅಲ್ಲಿ ಚರ್ಚೆ ಮಾಡಿದ ನಂತರ ಮುಂದೆ ಅದನ್ನು ವಿಚಾರ ಮಾಡುತ್ತೇವೆಂದರೆ ಏನು ಪ್ರಯೋಜನ? ಸರ್ಕಾರಕ್ಕೆ ಡೈರೆಕ್ಷನ್ ಕೊಡುವುದರಿಂದ ಏನು ಪ್ರಯೋಜನ? ಇವರು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ "ಗ್ರಾಮಗಳು ಶುಚಿಯಾಗಿರುವುದು ಅಭಿವೃದ್ಧಿಯ ಒಂದು ಪ್ರಮುಖ ಗುರಿಯೆಂದು ನಾವು ಭಾವಿಸುತ್ತೇವೆ. ಆದ್ದರಿಂದ 'ನಿರ್ಮಲ ಗ್ರಾಮ' ಎಂಬ ಹೊಸ ಯೋಜನೆಯಡಿಯಲ್ಲಿ ಇಡೀ ರಾಜ್ಯದಾದ್ಯಂತ ಕುಡಿಯುವ ನೀರಿನ ವ್ಯವಸ್ಥೆ ಮಾತ್ರವೇ ಅಲ್ಲದೆ ಗ್ರಾಮ ನೈರ್ಮಲ್ಯೀಕರಣ ವ್ಯವಸ್ಥೆಯನ್ನು ಒಂದು ನಿರ್ದಿಷ್ಟ ಅವಧಿಯಲ್ಲಿ ಒದಗಿಸಲು ನನ್ನ ಸರ್ಕಾರ ಉದ್ದೇಶಿಸಿದೆ ಎಂದು. ಇದರ ನಂತರ ಇನ್ನೂ ಏನು ಹೇಳಿದ್ದಾರೆಂದರೆ ಇದರಲ್ಲಿ ಕಾಯಿದೆ ತೊಡಕು ಇದೆ ಎಂದು ಹೇಳಿದ್ದಾರೆ. ಇದರ ಸಲುವಾಗಿ ವಿಶ್ವ ಬ್ಯಾಂಕ್ನವರು ಅಪ್ಪರ್ ಕೃಷ್ಣಕ್ಕೆ ಹಣ ಕೊಡುವುದಕ್ಕೆ ಮುಂದೆ ಬಂದಿದ್ದಾರೆ. ವಿಶ್ವ ಬ್ಯಾಂಕ್ನವರ ನಾರಂಸ್ ಯಾವ ಪ್ರಕಾರ ಇದೆ? ಎಷ್ಟು ದಿವಸದಲ್ಲಿ ಇದನ್ನು ಮಾಡುತ್ತೀರಿ? ರೂಲ್ಸ್ ಬಿಟ್ಟು ಮಾಡಬೇಕೆಂದು ನಾವು ಹೇಳುತ್ತಿಲ್ಲ. ಕಾಯಿದೆ ರೀತಿ ಮಾಡಬೇಕೆಂದು ನಾವು ಕೇಳುತ್ತಿದ್ದೇವೆ.

ಶ್ರೀ ಎನ್.ಜಿ. ಹಾಲಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಆತಂಕ ಏನೆಂದು ನನಗೆ ಗೊತ್ತಿದೆ. They are eager. But the problem is whether the direction given by the predecessor amounts to an order; who has got to give directions. ನಮ್ಮಲ್ಲೂ ಭದ್ರಾ ಪ್ರಾಜೆಕ್ಟ್ ಇದೆ. ಎಲ್ಲಾ ಹಳ್ಳಿಗಳಿಗೂ ಒಳಚರಂಡಿ ಯೋಜನೆಗೆ ಪ್ರಾವಿಷನ್ ಮಾಡಿಲ್ಲ. ನಾವು ಹೇಳುವುದನ್ನು ಕೇಳಿ These matters will have to be placed before the Board of Chief Engineers. Let us see what is their opinion.

12.10 ಪಿ.ಎಂ

ಶ್ರೀ ಎಸ್.ಹೆಚ್. ಕೌಜಲಗಿ : ಬೋರ್ಡ್ ಆಫ್ ಚೀಫ್ ಎಂಜಿನಿಯರ್ಸ್ ಮುಂದೆ ಎಂದು ಹೇಳುತ್ತಾರೆ. The matter is pending since one year. What is the use? ಇವತ್ತಿನ ದಿವಸ ಸೋರಿಕೆ ಇದೆ. ಆಕ್ಷನ್ ತೆಗೆದುಕೊಳ್ಳದೇ ಇದ್ದರೆ ಏನು ಮಾಡುವುದು?

(ಗೊಂದಲ)

ಶ್ರೀ ಸಿ. ಬೈರೇಗೌಡ : ಸರ್ಕಾರ ಹೇಳುವುದು ಒಂದು. ಮಾಡುವುದು ಒಂದು. ಬಹಳ ತೀವ್ರವಾದ ವಿಚಾರ ಇದೆ. ದಯವಿಟ್ಟು ಅವರು ಮಾತನಾಡಲು ಅವಕಾಶ ಕೊಡಿ.

ಶ್ರೀ ಎಸ್.ಹೆಚ್. ಕೌಜಲಗಿ : ಈ ಪ್ರಶ್ನೆಗೆ ಮಹತ್ವ ಇದೆ. ಆದ್ದರಿಂದ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಆ ಬಗ್ಗೆ ಒಪ್ಪಿದ್ದಾರೆ. ಅದಕ್ಕೆ ಅವಕಾಶ ಮಾಡಿಕೊಡುತ್ತೇವೆ.

**ಗೋಕಾಕ್ ವರದಿಯ ಅನುಷ್ಠಾನ**

1 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕನ್ನಡ ಆಡಳಿತ ಭಾಷೆಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಯೋಜನೆಗಳೇನು?*

*ಆ) ಗೋಕಾಕ್ ವರದಿಯನ್ನು ಜಾರಿಗೆ ತರಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

*ಇ) ಗಡಿನಾಡ ಪ್ರದೇಶಗಳಲ್ಲಿ ಕನ್ನಡ ಬೆಳವಣಿಗೆಯ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) 1) ಶ್ರೀ ಜಿ. ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವನ್ನು ಸರ್ಕಾರ ರಚಿಸಿದೆ.

2) ಏಪ್ರಿಲ್ 93ರಿಂದ ಮಾರ್ಚ್ 94ರವರೆಗಿನ ವರ್ಷವನ್ನು ಕನ್ನಡ ಜಾಗೃತಿ ವರ್ಷ ಎಂದು ಆಚರಿಸಲಾಗುತ್ತಿದೆ.

3) ಆಡಳಿತ ಪೂರಕ ಸಾಹಿತ್ಯದ ತಯಾರಿಕೆ ಪ್ರಕಟಣೆ, ಸರಬರಾಜು ಕಾರ್ಯವನ್ನು ಮುಂದುವರಿಸಿದೆ.